# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ,
## ಬ್ಯಾಟರಾಯನಪುರ ಉಪ ವಿಭಾಗ, ವಾರ್ಡ್ ನಂ. 06(ಥಣಿಸಂದ್ರ)
## ವಾರ್ಡ್‌ಸಮಿತಿಸಭೆ, ದಿನಾಂಕ: 29-11-2021ರ ಸಭಾ ನಡುವಳಿ

**ದಿನಾಂಕ: 29-11-2021ರಂದು ಬೆಳ್ಳಿಗೆ 9.00 ಗಂಟೆಗೆ** ವಾರ್ಡ್ ನಂ.06 ಥಣಿಸಂದ್ರ ವಾರ್ಡ್ ಸಮಿತಿಯ ನೋಡಲ್ ಅಧಿಕಾರಿಗಳಾದ ಶ್ರೀ ರೆಡ್ಡಿ ಶಂಕರ ಬಾಬು, ಮಾನ್ಯ ವಿಶೇಷ ಆಯುಕ್ತರು, (ಆಸ್ತಿಗಳು) ಬಿಬಿಎಂಪಿ ರವರ ಅಧ್ಯಕ್ಷತೆಯಲ್ಲಿ ಹೆಗಡೆನಗರ, 2ನೇ ಮುಖ್ಯರಸ್ತೆ, 4ನೇ ಅಡ್ಡರಸ್ತೆ, ಬಿಬಿಎಂಪಿ ಸಮುದಾಯ ಭವನದಲ್ಲಿ ನಡೆದ ವಾರ್ಡ್ ಸಮಿತಿಯ ಸಭೆಯ ನಡುವಳಿಗಳು

| ಕ್ರ.ಸಂ | ಸಭೆಗೆ ಹಾಜರಾಗಿರುವ ಅಧಿಕಾರಿಗಳು | ಹುದ್ದೆ |
|---|---|---|
| 1 | ಶ್ರೀ ರೆಡ್ಡಿ ಶಂಕರ ಬಾಬು | ನೋಡಲ್ ಅಧಿಕಾರಿಗಳು ವಾರ್ಡ್ ನಂ 06(ಥಣಿಸಂದ್ರ) ಹಾಗೂ ಮಾನ್ಯ ವಿಶೇಷ ಆಯುಕ್ತರು (ಆಸ್ತಿಗಳು), ಬಿಬಿಎಂಪಿ |
| 2 | ಶ್ರೀ ಸುರೇಶದೇವತರಾಜ್ | ಸಹಾಯಕ ಅಭಿಯಂತರರು ಹಾಗೂ ಸದಸ್ಯ ಕಾರ್ಯದಶಿ, ವಾರ್ಡ್ ಸಮಿತಿ, ವಾರ್ಡ್ ನಂ 06(ಥಣಿಸಂದ್ರ) |
| 3 | ಡಾ॥ ಅಲೀನಾ ಜನತ್ | ವೈದ್ಯಾಧಿಕಾರಿ, ಪ್ರಾ.ಆ.ಕೇಂ ಹೆಗಡೆನಗರ |
| 4 | ಶ್ರೀಮತಿ ಚಿತ್ರಾಜಯರಾಮ್ | ಸ.ಕಾ.ಅ (ಘನತ್ಯಾಜ್ಯ) ಬ್ಯಾಟರಾಯನಪುರ ವಿಭಾಗ, |
| 5 | ಶ್ರೀ ಕಿರಣ್ ಬಿ | ಸ.ಕಾ.ಅ ಯೋಜನಾ ವಿಭಾಗ, ಯಲಹಂಕ ವಲಯ |
| 6 | ಶ್ರೀ ಬಾಬುರೆಡ್ಡಿ | ಕಿರಿಯ ಅಭಿಯಂತರರು. ವಿದ್ಯುತ್ ಬಿಬಿಎಂಪಿ |
| 7 | ಶ್ರೀಮತಿ ದುರ್ಗಾ | ಪಿ.ಎಸ್.ಐಚಿಕ್ಕಜಾಲ ಸಂಚಾರಿ ಪೋಲಿಸ್ ಠಾಣೆ |
| 8 | ಶ್ರೀ ವಿ. ಪ್ರೇಮ ಕುಮಾರ್ | ಹಿ.ಆ. ಪರಿವೀಕ್ಷಕರು ವಾರ್ಡ್ ನಂ. 06 (ಥಣಿಸಂದ್ರ) |
| 9 | ಶ್ರೀ ಮಹೇಶ್ ಕುಮಾರಎಲ್. | ಕಿ.ಆ. ಪರಿವೀಕ್ಷಕರು ವಾರ್ಡ್ ನಂ. 06 (ಥಣಿಸಂದ್ರ) |
| 10 | ವೆಂಕಟೇಶ್ | ಕಂದಾಯ ಪರಿವೀಕ್ಷಕರು, ವಾರ್ಡ್ ನಂ. 06 |
| 11 | ಶ್ರೀ ಬಸವರಾಜಪ್ಪ | ಜಲ ಪರಿವೀಕ್ಷಕರು, ಬೆಂ.ಜ.ಮಂ |

**ಶ್ರೀ ಸುರೇಶದೇವತರಾಜ್** ವಾರ್ಡ್ ಸಮಿತಿ ಕಾರ್ಯದರ್ಶಿ ಹಾಗೂ ಸಹಾಯಕ ಅಭಿಯಂತರರು, ವಾರ್ಡ್ ಸಮಿತಿಯ ನೋಡಲ್ ಅಧಿಕಾರಿಗಳಾದ **ಶ್ರೀ ರೆಡ್ಡಿ ಶಂಕರ ಬಾಬು, ಮಾನ್ಯ ವಿಶೇಷ ಆಯುಕ್ತರು,** (ಆಸ್ತಿಗಳು) **ಬಿಬಿಎಂಪಿರವರಿಗೆ** ಹಾಗೂ ಸಭೆಗೆ ಹಾಜರಾಗಿದ್ದ ವಿವಿಧ ಇಲಾಖೆಯ ಅಧಿಕಾರಿಗಳು ಮತ್ತು ವಿವಿಧ ಬಡಾವಣೆಯ ಕ್ಷೇಮಾಭಿವೃದ್ಧಿ ಸಂಘದ ಪದಾಧಿಕಾರಿಗಳು ಹಾಗೂ ಸಾರ್ವಜನಿಕರಿಗೆ ಸ್ವಾಗತಿಸುವ ಮೂಲಕ ಸಭೆಯನ್ನು ಪ್ರಾರಂಭಿಸುತ್ತಾ ವಾರ್ಡ್ ಸಮಿತಿಯ ಸಭೆಯಲ್ಲಿ ಚರ್ಚಿಸಬೇಕಾದ ಅಜೆಂಡಾ ವಿಷಯದ ಬಗ್ಗೆ ತಿಳಿಸಿದರು.

1. **ಕೋವಿಡ್ -19 ರ ಸಂಬಂಧ ಸೊಂಕು ಹರಡವುದನ್ನು ತಡೆಗಟ್ಟುವ ಸಂಬಂಧ ತೆಗೆದುಕೊಳ್ಳಬೇಕಾದ ಮಂಜಾಗ್ರತ ಕ್ರಮಗಳ ಬಗ್ಗೆ**

    - ಶ್ರೀಮತಿ ಡಾ// ಅಲಿನಾ ಜನತ್, ವೈಧ್ಯಾಧಿಕಾರಿಗಳು ಹೆಗಡೆನಗರ ಪ್ರಾಥಮೀಕ ಆರೋಗ್ಯ ಕೇಂದ್ರರವರು ಮಾತನಾಡಿ ಓಮಿಕ್ರಾನ ಭೀತಿಯಿದ್ದು, ಓಮಿಕ್ರಾನ ತುಂಬ ಅಪಾಯಕಾರಿ ಮತ್ತು ವೇಗವಾಗಿ ಹರಡುವ ವೈರಸಯಾಗಿರುವ ಕಾರಣ ಸಾರ್ವಜನಿಕರು ಕಡ್ಡಾಯವಾಗಿ ಎರಡನೇ ಡೋಸ್ ವ್ಯಾಕ್ಸಿನ್ ತೆಗೆದುಕೊಳ್ಳಬೇಕು. ಹೋಟಲ್ ರೆಸ್ಟೋರಂಟ್ ಮತ್ತು ವಾಣಿಜ್ಯ ಅಂಗಡಿ ಮಳಿಗೆಗಳಲ್ಲಿ ಕೋರೋನಾ ಸೊಂಕು ಹರಡುವ ಭೀತಿ ಹೆಚ್ಚಾಗಿದ್ದು ಸಂಬಂಧಪಟ್ಟ ಹಿರಿಯ ಆರೋಗ್ಯ ನೀರಿಕ್ಷಕರು ಎಲ್ಲಾ ಹೋಟಲ್ ರೆಸ್ಟಾರಂಟ್‌ಗಳನ್ನು ಕೂಡಲೇಪರಿಶೀಲಿಸಿ ಸಿಬ್ಬಂದಿಗಳು ಕಡ್ಡಾಯವಾಗಿ ಎರಡುಡೋಸ್ ಲಸಿಕೆ ಪಡೆದಿದ್ದಾರೆಯೇ ಎಂಬುದರ ಬಗ್ಗೆ ಪರಿಶೀಲಿಸಬೇಕು. ಎರಡು ಡೋಸ್ ಲಸಿಕೆ ಪಡೆಯದಿದ್ದಲ್ಲಿ ಅಂತಹ ಹೋಟಲ್ ರೆಸ್ಟೋರಂಟ್‌ಗಳನ್ನು ಸೀಜ್ ಮಾಡಬೇಕಾಗಿ ನೋಡಲ್ ಅಧಿಕಾರಿಗಳು ಸೂಚಿಸಿದರು.

2. **ವಾರ್ಡ್ ವ್ಯಾಪ್ತಿಯಲ್ಲಿ ಕುಡಿಯುವ ನೀರು ಹಾಗೂ ಒಳಚರಂಡಿಗೆ ಸಂಬಂಧಿಸಿದ ವಿಷಯಗಳ ಬಗ್ಗೆ.**

- **ನವೀನ್ ಭುವನೇಶ್ವರಿನಗರ** ರವರು ಮಾತನಾಡಿ ದಾಸರಹಳ್ಳಿ ಗ್ರಾಮದಲ್ಲಿ ಒಳಚರಂಡಿಯ ಲೀಡ್‌ಆಫ್ ಸಮಸ್ಯೆಯಿದ್ದು, ಇದರಿಂದಾಗಿ ಬಹಳ ತೊಂದರೆಯಾಗುತ್ತಿದ್ದು ಬಿ.ಡಬ್ಲ್ಯೂ.ಎಸ್.ಎಸ್.ಬಿ,ರವರು ಇದರ ಬಗ್ಗೆ ಹೆಚ್ಚಿನ ಗಮನಹರಿಸಿ ಕಾಮಗಾರಿ ಪೂರ್ಣಗೊಳಿಸಲು ಕ್ರಮವಹಿಸಬೇಕಾಗಿ ಕೋರಿದರು.
- **ಶಿರಡಿ ಸಾಯಿನಗರ ಕ್ಷೇಮಾಭಿವೃದ್ಧಿ ಸಂಘ**(ರಿ)ದ ಪದಾಧಿಕಾರಿಗಳು ಮಾತನಾಡಿ ಶಿರಡಿ ಸಾಯಿನಗರ 1ನೇ ಮತ್ತು 2ನೇ ಅಡ್ಡ ರಸ್ತೆಗಳಲ್ಲಿ ಒಳಚರಂಡಿ ಕೊಳವೆಗಳನ್ನು ಅಳವಡಿಸಿರುವುದಿಲ್ಲ. ಆದ್ದರಿಂದ ಬಿ.ಡಬ್ಲ್ಯೂ.ಎಸ್.ಎಸ್.ಬಿ,ರವರು ಒಳಚರಂಡಿ ಕಾಮಗಾರಿ ಪೂರ್ಣಗೊಳಿಸಲು ಕ್ರಮವಹಿಸಬೇಕಾಗಿ ಕೋರಿದರು.
- **ವಾರ್ಡ್ ಅಭಿಯಂತರರು** ಮಾತನಾಡಿ ಭೂವನೇಶ್ವರಿನಗರ ಮುಖ್ಯ ರಸ್ತೆಯಲ್ಲಿ ಒಳಚರಂಡಿ ಕಾಮಗಾರಿ ಬಾಕಿಯಿದ್ದು, ಭುವನೇಶ್ವರಿನಗರದ ಎಲ್ಲಾ'ಎ' ಅಡ್ಡರಸ್ತೆಗಳಿಂದ ಒಳಚರಂಡಿಯ ಸಂಪರ್ಕ ಮುಖ್ಯರಸ್ತೆಗೆ ನೀಡಬೇಕಾಗಿರುತ್ತದೆ. ಪ್ರತಿದಿನ ಭುವನೇಶ್ವರಿನಗರದ ಸಾರ್ವಜನಿಕರಿಂದ ಅಡ್ಡ ರಸ್ತೆಗಳಿಗೆ ಡಾಂಬರೀಕರಣ ಕೈಗೊಳ್ಳಲು ದೂರುಗಳು ಬರುತಿದ್ದು, ಬಿ.ಡಬ್ಲ್ಯೂ.ಎಸ್.ಎಸ್.ಬಿ ವತಿಯಿಂದ ಭೂವನೇಶ್ವರಿನಗರ ಮುಖ್ಯ ರಸ್ತೆಯಲ್ಲಿ ಬಾಕಿವಿರುವ ಒಳಚರಂಡಿ ಕಾಮಗಾರಿ ಪುರ್ಣಗೊಳಿಸಿದ ನಂತರವೇಎಲ್ಲಾ 'ಎ' ಅಡ್ಡರಸ್ತೆಗಳಿಗೆ ಡಾಂಬರೀಕರಣ ಕೈಗೊಳ್ಳಲಾಗುವುದೆಂದು ಸಭೆಗೆತಿಳಿಸಿದರು.
- **ಶ್ರೀನಿವಾಸರಾವ್ ಅಮರ ಜ್ಯೋತಿನಗರ** ರವರು ಮಾತನಾಡಿ ಬಿ.ಡಬ್ಲ್ಯೂ.ಎಸ್.ಎಸ್.ಬಿ ವತಿಯಿಂದ ಎಸ್.ಟಿ.ಪಿ ಕಾಮಗಾರಿ ಬಾಕಿವಿರುತ್ತದೆ, ಕೆಲವು ಸ್ಥಳಗಳಲ್ಲಿ ಒಳಚರಂಡಿ ಓವರ್ ಫ್ಲೋ ಆಗುತ್ತಿರುವ ಕಾರಣ ಒಳಚರಂಡಿ ಸಂಪರ್ಕ ನೀಡಲು ಸಾಧ್ಯವಾಗುತ್ತಿರುವುದಿಲ್ಲ. ಆದ್ದರಿಂದ ಬಿ.ಡಬ್ಲ್ಯೂ.ಎಸ್.ಎಸ್.ಬಿ ಮೇಲಾಧೀಕಾರಿಗಳಾದ ಎಂ.ಡಿ ಅಥವಾ ಮುಖ್ಯ ಅಭಿಯಂತರರನ್ನು ವಾರ್ಡ್‌ವತಿಯಿಂದ ನಿಯೋಗವನ್ನು ತೆಗೆದುಕೊಂಡು ಹೋಗಿ ಸಮಸ್ಯಗಳ ಬಗ್ಗೆ ಚರ್ಚಿಸುವುದು ಸೂಕ್ತವೆಂದು ತಿಳಿಸಿದರು.
- **ಕುಡಿಯುವ ನೀರು ಸರಬರಾಜು ಬಗ್ಗೆ.** ನೋಡಲ್ ಅಧಿಕಾರಿಗಳು ಮಾತನಾಡಿ ವಾರ್ಡ್ ನಕ್ಷೆಯಲ್ಲಿ ವಾರ್ಡ್ ವ್ಯಾಪ್ತಿಯಲ್ಲಿವಿರುವ ಎಲ್ಲಾ ಕೊಳವೆ ಬಾವಿಗಳನ್ನು ಗುರುತು ಮಾಡಿ ಪ್ರತಿಯೊಂದು ಕೊಳವೆಬಾವಿಗೆ ಒಂದು ನಂಬರಗಳನ್ನು ನೀಡಿ ನಕ್ಷೆಯನ್ನು ತಯಾರಿಸಬೇಕಾಗಿ ವಾರ್ಡ್ ಅಭಿಯಂತರಿಗೆ ಸೂಚಿಸಿದರು. ಹಾಗೂ ಎಲ್ಲಾ ವಾಟರ್‌ಮೆನ್‌ಗಳು ಕಡ್ಡಯವಾಗಿ ಸಮವಸ್ತ್ರಧರಿಸಬೇಕಾಗಿ ಮತ್ತು ವಾಟರ್‌ಮೆನ್‌ಗಳ ಸಭೆಯಲ್ಲಿ ಚರ್ಚಿಸಿರುವಂತೆ ಸಾರ್ವಜನಿಕರಿಗೆ ಕುಡಿಯುವ ನೀರು ಸರಬರಾಜನ್ನು ನಿಗದಿತ ಸಮಯದಂತೆ ಮಾಡಬೇಕಾಗಿ ತಿಳಿಸಿದರು ಹಾಗೂ ಇನ್ಮುಂದೆ ವಾಟರ್‌ಮೆನ್‌ಗಳು ಕಡ್ಡಯವಾಗಿ ವಾರ್ಡ್ ಸಮಿತಿ ಸಭೆಗೆ ಹಾಜರಿರಬೇಕಾಗಿ ಸೂಚನೆ ನೀಡಿದರು.

3. **ವಾರ್ಡ್ ವ್ಯಾಪ್ತಿಯಲ್ಲಿ ಘನತ್ಯಾಜ್ಯ ಸಂಗ್ರಹಣೆ ಮತ್ತು ವಿಲೇವಾರಿ ಬಗ್ಗೆ**

- ವಾರ್ಡ್ ವ್ಯಾಪ್ತಿಯಲ್ಲಿ ಘನತ್ಯಾಜ್ಯ ಸಂಗ್ರಹಣೆ ಮತ್ತು ವಿಲೇವಾರಿಯನ್ನು ಸರಿಯಾಗಿ ಆಗುತ್ತಿರುವುದಿಲ್ಲ ಎಂದು ಸಾರ್ವಜನಿಕರು ಹಾಗೂ ವಿವಿಧ ಬಡಾವಣೆಗಳಿಂದ ಹಾಜರಾದ ವಿವಿಧ ಬಡಾವಣೆಯ ಕ್ಷೇಮಾಭಿವೃದ್ಧಿ ಸಂಘದ ಸದಸ್ಯರುಗಳು ಹಾಗೂ ಸಾರ್ವಜನಿಕರು ತಿಳಿಸಿದರು. ಈ ವಿಷಯದ ಬಗ್ಗೆ ಸಂಬಂದಪಟ್ಟ ಸಹಾಯಕ ಕಾರ್ಯಪಾಲಕ ಅಭಿಯಂತರಾದ ಶ್ರೀಮತಿ ಚಿತ್ರಾ ಜಯರಾಮ ರವರು ಮಾತನಾಡಿ ಘನತ್ಯಾಜ್ಯ ಸಂಗ್ರಹಣೆ ಮತ್ತು ವಿಲೇವಾರಿ ಕಾರ್ಯಕ್ಕೆ ಹೊಸದಾಗಿ ಗುತ್ತಿಗೆದಾರರನ್ನು ನೇಮೀಸಲಾಗಿದ್ದು, ಸದರಿಯವರಿಗೆ ಎಲ್ಲಾ ಬ್ಲಾಕ್‌ಸ್ಪಾಟ್‌ಗಳಲ್ಲಿ ಶೇಖರಣೇಯಾದ ತ್ಯಾಜ್ಯವನನು ವಿಲೇವಾರಿ ಮಾಡಲು ಕನಿಷ್ಠ 15 ದಿನಗಳ ಕಾಲಾವಕಾಶ ಬೇಕಾಗಿರುತ್ತದೆ ಎಂದು ಸ.ಕಾ.ಅ(ಘನತ್ಯಾಜ್ಯ) ರವರು ತಿಳಿಸಿದರು. ಹೆಗಡೆನಗರದ ಪಶ್ಚಿಮ ಭಾಗಕ್ಕೆ ಆಟೋಟಿಪ್ಪರ್ ಬರುತ್ತಿರುವುದಿಲ್ಲ ಎಂದು ಸಾರ್ವಜನಿಕರು ಸಭೆಯಲ್ಲಿ ತಿಳಿಸಿದರು. ಇದಕ್ಕೆ ಮಾನ್ಯ ನೋಡಲ್ ಅಧಿಕಾರಿಗಳು ಮಾತನಾಡಿ ವಾರ್ಡ್ ವ್ಯಾಪ್ತಿಯಲ್ಲಿ ತ್ಯಾಜ್ಯ ಸಂಗ್ರಹಣೆಗಾಗಿ ಪ್ರತಿ 750 ಮನೆಗಳಿಗೆ ಒಂದು ಆಟೋಟಿಪ್ಪರ್‌ಯಂತೆ ಬ್ಲಾಕ್‌ಗಳನ್ನು ಮಾಡಿ, ಪ್ರತಿ ಬ್ಲಾಕ್‌ಗೆ ಒಂದು ಆಟೋ ಟಿಪ್ಪರ್ ನೇಮಿಸಬೇಕಾಗಿ ನೋಡಲ್ ಅಧೀಕಾರಿಗಳು ಸ.ಕಾ.ಅ(ಘನತ್ಯಾಜ್ಯ)ರವರಿಗೆ ಸೂಚಿಸಿದರು. ಯಾವ ಪ್ರದೇಶಕ್ಕೆ ಯಾವ ಆಟೋಟಿಪ್ಪರ್ ಹೊಗುತ್ತದೆ ಎಂಬುದರ ಬಗ್ಗೆ ಸ್ಪಷ್ಟವಾಗಿ ಸಾರ್ವಜನಿಕರಿಗೆ ಮಾಹಿತಿ ನೀಡಬೇಕಾಗಿ ಸಹ ಸೂಚಿಸಿದರು. ಬ್ಲಾಕ್‌ವೈಸ್ ಆಟೋ ಟಿಪ್ಪರ್‌ಗಳನ್ನು ವಾರ್ಡ್ ನಕ್ಷೆಯಲ್ಲಿ ಗುರುತು ಮಾಡಿ ನಕ್ಷೆ ಪ್ರತಿಯನ್ನು ಮುಂದಿನ ಸಭೆಗೆ ನೀಡಬೇಕಾಗಿ ಸೂಚಿಸಿದರು.
- ಭುವನೇಶ್ವರಿನಗರದ ನಿವಾಸಿಗಳು ಮಾತನಾಡಿ ಭುವನೇಶ್ವರಿನಗರಕ್ಕೆ 2–3 ದಿನಗಳಿಗೊಮ್ಮೆ ಆಟೋ ಟಿಪ್ಪರ್ ಬರುತ್ತಿರುವುದರಿಂದ ತ್ಯಾಜ್ಯ ವಿಲೇವಾರಿಗೆ ತೊಂದರೆಯಾಗುತ್ತಿದೆ ಎಂದುಸಭೆಗೆ ತಿಳಿಸಿದರು.

4. **ವಾರ್ಡ್ ವ್ಯಾಪ್ತಿಯಲ್ಲಿ ಬೀದಿ ದೀಪಗಳ ನಿರ್ವಹಣೆ ಬಗ್ಗೆ.**

- ಸಾರ್ವಜನಿಕರು ಮಾತನಾಡಿ ವಾರ್ಡ್ ವ್ಯಾಪ್ತಿಯಬಹಳಷ್ಟು ರಸ್ತೆಗಳಲ್ಲಿ ಬೀದಿ ದೀಪಗಳು ದುರಸ್ಥಿಯಲ್ಲಿದ್ದು, ಸಕಾಲದಲ್ಲಿ ಬೀದಿ ದೀಪಗಳನ್ನು ದುರಸ್ತಿ ಮಾಡುತ್ತಿರುವುದಿಲ್ಲ ಎಂದು ತಿಳಿಸಿದರು. ಕೆಲವು ಪ್ರದೇಶಗಳಲ್ಲಿ ಹೊಸದಾಗಿಬೀದಿ ದೀಪಗಳು ಅವಶ್ಯಕವಾಗಿರುತ್ತವೆ ಎಂದು ಸಹ ತಿಳಿಸಿದರು.

5. **ಇನ್ನಿತರೆ ವಿಷಯಗಳು ಮಾನ್ಯ ನೋಡಲ್ ಅಧಿಕಾರಿಗಳ ಅಪ್ಪಣೆ ಮೇರೆಗೆ**

- **ದಾಸಪ್ಪ ಹೆಗಡೆನಗರರವರು** ಮಾತನಾಡಿ ಹೆಗಡೆನಗರದಲ್ಲಿ ಮುಸ್ಲಿಮ್, ಕ್ರೀಶ್ಚಿಯನ್ ಮತ್ತು ಹಿಂದುಗಳ ಒಟ್ಟು ಮೂರು ಸ್ಮಶಾನಗಳುವಿದ್ದು, ಹಿಂದು ಸ್ಮಶಾನದ ನಿಯಂತ್ರಣ ಮಾಡುವುದು ಅವಶ್ಯಕವಾಗಿದ್ದು, ಈ ಸಶಾನಕ್ಕೆ ಗೇಟವಿರುವುದಿಲ್ಲ, ಆದ್ದರಿಂದ ಹೊಸದಾಗಿ ಒಂದು ಗೇಟ್ ಅಳವಡಿಸಬೇಕಾಗಿ ಕೋರಿದರು. ಇದಕ್ಕೆ ವಾರ್ಡ್ ಸಮಿತಿಯ ನೋಡಲ್ ಅಧಿಕಾರಿಗಳು ಮಾತನಾಡುತ್ತಾ ಸಾರ್ವಜನಿಕರ ಕೋರಿಕೆಯಂತೆ ಈ ಕೂಡಲೇ ಹೊಸದಾಗಿ ಒಂದು ಗೇಟ್ ಅಳವಡಿಸುವಂತೆ ಹಾಗೂ ಸದರಿ ವ್ಯವಸ್ಥೆಗೆ ರೂ.10.000/–ಗಳನ್ನು ನೀಡುವುದಾಗಿ ಸಭೆಗೆ ಸೂಚಿಸಿ ಈ ಕೂಡಲೇ ಅಗತ್ಯ ಕ್ರಮ ಕೈಗೊಳ್ಳುವಂತೆ ಸಹಾಯಕ ಅಭಿಯಂತರರುರವರಗೆ ಸೂಚಿಸಿ ವಾರ್ಡ್‌ನಲ್ಲಿ ಅವಶ್ಯಕವಿರು ಸಣ್ಣ–ಪುಟ್ಟ ಕೆಲಸ ಕಾರ್ಯಗಳನ್ನು ಸ್ಥಳಿಯ ಎನ್.ಜಿ.ಓ ಮೂಲಕ ಕೈಗೊಳ್ಳುವಂತೆ ತಿಳಿಸಿದರು.
- ಹೆಗಡೆನಗರದಲ್ಲಿ ಎರಡು ಸ್ಥಳದಲ್ಲಿ ರಸ್ತೆ ಉಬ್ಬುಗಳನ್ನು ನಿರ್ಮಿಸಲುಕೋರಿದರು. ಹಾಗೂ ಹೆಗಡೆನಗರ ವೃತ್ತದ ಹತ್ತಿರವಿರುವ ಪ್ಯಾನಲ್ ಬೋರ್ಡ ಹಾಳಾದ ಕಾರಣ ಬೀಗ ಹಾಕಲು ತೊಂದರೆಯಾಗುತ್ತಿರುವದರಿಂದ ಹೊಸದಾಗಿ ಪ್ಯಾನಲ್ ಬೋರ್ಡ ಅಳವಡಿಸಬೇಕಾಗಿ ಕೋರಿದರು. ಇದಕ್ಕೆ ವಾರ್ಡ್ ಅಭಿಯಂತರರು ಮಾತನಾಡಿ ಕೊಳವೆ ಬಾವಿಗಳ ವಾರ್ಷಿಕ ನಿರ್ವಹಣೆ ಟೆಂಡರ್ ಅವಧಿಎರಡು ತಿಂಗಳ ಹಿಂದೆ ಮುಕ್ತಾಯವಾಗಿದ್ದು ಹೊಸದಾಗಿ ಟೆಂಡರ್ ಮುಖಾಂತರ ಗುತ್ತಿಗೆದಾರರಿಗೆ ಕಾರ್ಯಾದೇಶ ನೀಡಿರುವುದಿಲ್ಲ. ಆದ್ದರಿಂದ ಹೊಸದಾಗಿ ಪ್ಯಾನಲ್ ಬೋರ್ಡ ಅಳವಡಿಸಲು ಸಾಧ್ಯವಾಗಿರುವುದಿಲ್ಲ ಮುಂದಿನ ದಿನದಲ್ಲಿ ಅಳವಡಿಸಲು ಕ್ರಮ ವಹಿಸಲಾಗುವುದು ಎಂದು ಸಭೆಗೆ ತಿಳಿಸಿದರು.

- **ಚಿಕ್ಕಜಾಲ ಟ್ರಾಫೀಕ್ ಪೋಲೀಸ್‌ರವರು** ಮಾತನಾಡಿ ಥಣಿಸಂದ್ರ ಮುಖ್ಯರಸ್ತೆಯಲ್ಲಿ ವಾಹನಗಳ ಓಡಾಟ ಹೆಚ್ಚುವಿರುವ ಕಾರಣ ಅವಶ್ಯವಿರುವ ಜಾಗಗಳಲ್ಲಿ ಹೆಚ್.ಆರ್.ಪಿ.ಸಿ ನಿರ್ಮಿಸಲು ಕೋರಿದರು. ಹಾಗೂ ಈ ಹಿಂದೆ ಸಹ ಅನೇಕ ಬಾರಿ ಸದರಿ ವಿಷಯದ ಬಗ್ಗೆ ಪ್ರಸ್ತಾಪಿಸಲಾಗಿದ್ದರು ಇಲ್ಲಿಯ ತನಕ ಯಾವುದೇ ಕ್ರಮ ವಹಿಸಲಾಗಿರುವುದಿಲ್ಲವೆಂದು ತಿಳಿಸಿದರು. ಹೆಚ್.ಆರ್.ಪಿ.ಸಿಯನ್ನು ಬಿ.ಬಿ.ಎಂ.ಪಿ ಕೇಂದ್ರ ಕಛೇರಿಯ ಟಿ.ಇ.ಸಿ. ರವರುಕ್ರಮ ವಹಿಸಬೇಕಾಗಿರುತ್ತದೆ ಎಂದು ವಾರ್ಡ್ ಅಭಿಯಂತರರು ಸಭೆಗೆ ತಿಳಿಸಿದರು. ನಾರಾಯಣಪುರ ಕ್ರಾಸ್ ಹತ್ತಿರ ನಿರ್ಮಿಸಿರುವ ಫ್ಲೈಓವರ್ ಪಕ್ಕದ ಸರ್ವಿಸ್ ರಸ್ತೆಗಳು ತುಂಬ ಹಾಳಾಗಿದ್ದು ಈ ರಸ್ತೆಗಳನ್ನು ಕೂಡಲೇ ಸರಿಪಡಿಸಬೇಕು. ಥಣಿಸಂದ್ರ ಮುಖ್ಯ ರಸ್ತೆಯಲ್ಲಿ ನಾರಾಯಣಪುರ ಕ್ರಾಸ್ ಹತ್ತಿರದ ಫ್ಲೈಓವರ್ ನಂತರ ಮಳೆ ನೀರು ಸರಾಗವಾಗಿ ಹರಿಯದೆರಸ್ತೆಯಲ್ಲಿ ನೀರು ನಿಲ್ಲುವಕಾರಣ ಮಳೆಬಂದಾಗ ಟ್ರಾಫೀಕ್ ಜಾಮ್‌ಯಾಗುತ್ತಿರುವುದಾಗಿ ತಿಳಿಸಿದರು. ಹೆಗಡೆನಗರ ವೃತ್ತದ ಹತ್ತಿರ ಸಾರ್ವಜನಿಕ ಶೌಚಾಲಯ ಅವಶ್ಯಕವಾಗಿರುತ್ತದೆ ಎಂದು ತಿಳಿಸಿದರು. ಸದರಿ ವಿಷಯಕ್ಕೆ ವಾರ್ಡ್ ಅಭಿಯಂತರರು ಮಾತನಾಡಿ ಸಾರ್ವಜನಿಕ ಶೌಚಾಲಯ ನಿರ್ಮಿಸಲುಸ್ಥಳದ ಸಮಸ್ಯೆವಿರುವದಿಂದ ಶೌಚಾಲಯ ನಿರ್ಮಿಸಿರುವುದಿಲ್ಲ ಎಂದು ತಿಳಿಸಿದರು ಹಾಗೂ ಸೂಕ್ತ ಜಾಗವನ್ನು ಗುರುತಿಸಿದಲ್ಲಿ ಶೌಚಾಲಯ ನಿರ್ಮೀಸಲು ಅಗತ್ಯಕ್ರಮ ವಹಿಸಲಾಗುವುದೆಂದು ಸಭೆಗೆ ತಿಳಿಸಿದರು.
- **ಪೂರ್ಣಿಮಾ ಭುವನೇಶ್ವರಿನಗರ** ರವರು ಮಾತನಾಡಿ ಭೂವನೇಶ್ವರಿನಗರದಲ್ಲಿ ಅಡ್ಡ ರಸ್ತೆಗಳಿಗೆ ವೆಟ್ ಮಿಕ್ಸ್ ಹಾಕಿ ಬಹಳ ದಿನಗಳಾಗಿದ್ದು, ಡಾಂಬರೀಕರಣ ಕಾಮಗಾರಿ ಕೈಗೊಳ್ಳಲು ಹಾಗೂ ಭುವನೇಶ್ವರಿನಗರ ಮುಖ್ಯ ರಸ್ತೆಯಲ್ಲಿ ಫುಟಪಾತ ತೆರವು ಕಾರ್ಯಚರಣೆ ಕೈಗೊಳ್ಳಬೇಕಾಗಿ ಕೋರಿದರು. ರಿಲಾಯನ್ಸ್ ಫ್ರೇಶ್ ಹತ್ತಿರ ವಾಹನಗಳ ಓಡಾಟಕ್ಕೆ ತೊಂದರೆಯಾಗುತ್ತಿರುವ ಕಾರಣ ಟ್ರಾಫೀಕ್ ಪೋಲೀಸ್‌ರವರು ಅಗತ್ಯಕ್ರಮ ವಹಿಸಬೇಕಗಿ ಕೋರಿದರು.
- **ವಾರ್ಡ್ ಅಭಿಯಂತರರು** ಮಾತನಾಡಿ ಥಣಿಸಂದ್ರ ಮುಖ್ಯರಸ್ತೆಯಲ್ಲಿ ಬರುವ ಎಲ್ಲಾ ಪಾದಚಾರಿ / ರಸ್ತೆಗಳಲ್ಲಿ ಬೀದಿ ವ್ಯಾಪಾರಿಗಳು ವ್ಯಾಪಾರ ಮಾಡುತ್ತಿರುವದರಿಂದ ಸಾರ್ವಜನಿಕರಿಗೆ ಓಡಾಡಲು ಮತ್ತು ವಾಹನಗಳ ಓಡಾಟಕ್ಕೆ ತೊಂದರೆಯಾಗುತ್ತಿರುವ ಕಾರಣ ಬಾಣಸವಾಡಿ ಟ್ರಾಫಿಕ್ ಪೋಲೀಸ್ ಸ್ಟೇಷನ್ ರವರು ಅಗತ್ಯ ಕ್ರಮವಹಿಸಲು ಮತ್ತೊಮ್ಮೆ ಕೋರಿದರು ಹಾಗೂ ಈ ಸಂಬಂಧ ಕೂಡಲೇ ಪಾದಚಾರಿ ಒತ್ತುವಾರಿದಾರರನ್ನು ತೆರವುಗೊಳಿಸುವ ಸಂಬಂಧ ಹಿರಿಯ ಆರೋಗ್ಯ ಪರಿವೀಕ್ಷಕರ, ಟ್ರಾಫಿಕ್ ಪೋಲೀಸ್ ಇನ್ಸ್‌ಪೇಟರ್ ಹಾಗೂ ಮಾರ್ಷಲ್ ಒಳಗೊಂಡಂತೆ ಕಾರ್ಯಚಾರಣೆ

ತಂಡವನ್ನು ರಚಿಸಿ ಅಗತ್ಯ ಕ್ರಮಕೈಗೊಳ್ಳುವಂತೆ ಹಾಗೂ ಇತ್ತೀಚಿಗೆ ಬಿದ್ದಿರುವ ಭಾರಿ ಮಳೆಯಿಂದಾಗಿ ಡಿಫೇನ್ಸ್ ಬಡಾವಣೆ, ಡೈನಸ್ಟಿ ಬಡಾವಣೆ, ದಾಸರಹಳ್ಳಿ ಎಕ್ಸಟೆನಷನ್, ಫಾತಿಮಾ ಬಡಾವಣೆ, ತೂಬಾ ಬಡಾವಣೆಗಳಲ್ಲಿ ಮಳೆ ನೀರು ಮನೆಗಳಿಗೆ ನುಗ್ಗಿದ್ದು, ಬಿ.ಬಿ.ಎಂ.ಪಿ ವತಿಯಿಂದ ಪಂಪುಗಳನ್ನು ಅಳವಡಿಸಿ ನೀರು ಹೊರಗೆ ತೆಗೆದುಹಾಕಲಾಗಿದೆ.

- **ವಾಲಂಟಿಯರ್ಸ್‌ಗಳಾಗಿ** ಕಾರ್ಯ ನಿರ್ವಹಿಸಲು ಇಚ್ಚೀಸಿರುವ ವಾಲಂಟಿಯರ್ಸ್‌ಗಳಿಗೆ ಬಿ.ಬಿ.ಎಂ.ಪಿ ವತಿಯಿಂದ ಗುರುತಿನ ಚಿಟಿ ನೀಡಬೇಕಾಗಿ ಕೋರಿದರು.
- **ಶಿವಯ್ಯ ಹೆಗಡೆನಗರರವರು** ಮಾತನಾಡಿ ವಾರ್ಡ್ ವ್ಯಾಪ್ತಿಯಲ್ಲಿ ಪ್ಲಾಸ್ಟಿಕ್ ಬಳಕೆ ಹೆಚ್ಚಾಗಿದ್ದು, ಹಿರಿಯ ಮತ್ತು ಕಿರಿಯ ಆರೋಗ್ಯ ಪರೀವಿಕ್ಷಕರು ಅಂಗಡಿ ಮತ್ತು ಹೋಟಲ್‌ಗಳಲ್ಲಿ ಪ್ಲಾಸ್ಟಿಕ್ ಬಳಕೆ ಪರಿಶೀಲಿಸಬೇಕು ಹಾಗೂ ಸೀಜ್ ಮಾಡಲು ಕ್ರಮವಹಿಸಬೇಕು.
- **ಶ್ರೀನಿವಾಸರಾವ್ ಅಮರ ಜ್ಯೋತಿನಗರ** ರವರು ಮಾತನಾಡಿ ವಾರ್ಡ್ ವ್ಯಾಪ್ತಿಯಲ್ಲಿ ಆಶ್ವಥನಗರದ ತೂಬಾ ಬಡಾವಣೆ, ಅಮರಜ್ಯೋತಿ ನಗರ ಮಂಜುನಾಥ ಚೌಲಟ್ರಿ ಹತ್ತಿರ ಮತ್ತು ಫಾತಿಮಾ ಬಡಾವಣೆಯಲ್ಲಿ ಮಳೇ ನೀರು ಕಾಲುವೆಯ ಆರ್.ಸಿ.ಸಿ. ರಿಟೇನಿಂಗ್‌ವಾಲ್ (ಎಸ್.ಡಬ್ಲ್ಯೂ.ಡಿ) ನಿರ್ಮಾಣ ಅಪೂರ್ಣವಾಗಿರುವ ಕಾರಣ ಇತ್ತೀಚಿಗೆ ಬಿದ್ದ ಭಾರಿ ಮಳೆಗೆ ಪ್ರವಾಹ ಉಂಟಾಗಿ ಬಹಳಷ್ಟು ಮನೆಗಳಿಗೆ ನೀರು ನುಗ್ಗಿರುತ್ತದೆ ಹಾಗೂ ರಸ್ತೆಗಳಲ್ಲಿ ನೀರು ನಿಂತಿರುತ್ತದೆ. ಬೃಹತ್ ನೀರುಗಾಲುವೆ ಅಧೀಕಾರಿಗಳು ಕೂಡಲೇ ಬಾಕಿವಿರುವ ಆರ್.ಸಿ.ಸಿ. ರಿಟೇನಿಂಗ್‌ವಾಲ್ ತುರ್ತಾಗಿ ನಿರ್ಮಾಣ ಮಾಡಲು ಅಗತ್ಯ ಕ್ರಮ ವಹಿಸಬೇಕಾಗಿ ಕೋರಿದರು.
- **ಸಾರ್ವಜನಿಕರು ಮಾತನಾಡಿ ಬಹಳಷ್ಟು** ಅಧಿಕಾರಿಗಳು ವಾರ್ಡ್ ಸಮಿತಿಯ ಸಭೆಗೆ ಗೈರು ಹಾಜರಾಗುವದರಿಂದ ಸಾರ್ವಜನಿಕರು ಸಂಬಂದಪಟ್ಟ ಅಧಿಕಾರಿಗಳಿಗೆ ತಮ್ಮ ಅಹವಾಲುಗಳನ್ನು ನೀಡಲು ಸಾಧ್ಯವಾಗುತ್ತಿರುವುದಿಲ್ಲವೆಂದು ಸಭೆಗೆ ತಿಳಿಸಿದರು. ನೋಡಲ್ ಅಧಿಕಾರಿಗಳು ಮಾತನಾಡಿ ವಾರ್ಡ್ ಸಮಿತಿಯ ಸಭೆಗೆ ಗೈರು ಹಾಜರಾಗಿರುವ ಅಧಿಕಾರಿಗಳಿಗೆ ನೋಟಿಸ್ ನೀಡಲಾಗುವುದೆಂದು ತಿಳಿಸಿದರು.

ಕೊನೆಯದಾಗಿ ಮಾನ್ಯ ನೋಡಲ್ ಅಧಿಕಾರಿಗಳು ಹಾಗೂ ವಿಶೇಷ ಆಯುಕ್ತರು (ಆಸ್ತಿಗಳು) ಬಿ.ಬಿ.ಎಂ.ಪಿ ರವರು ಮಾತನಾಡಿ ಮೇಲ್ಕಂಡಂತೆ ಸಭೆಯಲ್ಲಿ ಚರ್ಚಿಸಿರುವ ಎಲ್ಲಾ ವಿಷಯಗಳನ್ನು ಗಂಬೀರವಾಗಿ ಪರಿಗಣಿಸಿ ಎಲ್ಲಾದೂರು ಮತ್ತು ಸಲಹೆ ಮತ್ತು ಸೂಚನೆಗಳನ್ನು ಕಾರ್ಯರೂಪಕ್ಕೆ ತರಲು ಸಂಬಂಧಪಟ್ಟ ಇಲಾಖೆ ಅಧಿಕಾರಿಗಳು ಅಗತ್ಯ ಕ್ರಮ ಕೈಗೊಳ್ಳುವಂತೆ ಸೂಚಿಸುತ್ತಾ ಸಭೆಗೆ ಹಾಜರಾಗಿದ್ದ ಎಲ್ಲಾ ಅಧಿಕಾರಿಗಳಿಗೆ ಹಾಗೂ ವಿವಿಧ ಬಡಾವಣೆ ಕ್ಷೇಮಾಭಿವೃದ್ಧಿ ಸಂಘದ ಪದಾಧಿಕಾರಿಗಳು ಹಾಗೂ ಹಾಜರಾಗಿರುವ ಸಾರ್ವಜನಿಕರಿಗೆ ವಂದನಾರ್ಪಣೆಯೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

29.11.2021

**ಕಾರ್ಯದರ್ಶಿ**
ಹಾಗೂ ಸಹಾಯಕಅಭಿಯಂತರರು
ವಾರ್ಡ್ ನಂ. 06, (ಥಣಿಸಂದ್ರ)

**ನೋಡಲ್ ಅಧಿಕಾರಿಗಳು**
ವಾರ್ಡ್ ಸಮಿತಿ, ವಾರ್ಡ್ ನಂ. 06(ಥಣಿಸಂದ್ರ)
ಹಾಗೂ ವಿಶೇಷ ಆಯುಕ್ತರು(ಆಸ್ತಿಗಳು)ಬಿ.ಬಿ.ಎಂ.ಪಿ

**ಪ್ರತಿಯನ್ನು.**

1. ಕೌನ್ಸಿಲ್ ಕಾರ್ಯದರ್ಶಿ, ಬಿಬಿಎಂಪಿ ಕೇಂದ್ರ ಕಛೇರಿ, ರವರ ಅವಗಾಹನೆಗಾಗಿ ಸಲ್ಲಿಸಿದೆ.
2. ವಲಯ ಜಂಟಿ ಆಯುಕ್ತರು, ಯಲಹಂಕ ವಲಯರವರಿಗೆ ಅವಗಾಹನೆಗೆ ಸಲ್ಲಿಸಿದೆ.
3. ಮುಖ್ಯ ಅಭಿಯಂತರರು, ಯಲಹಂಕ ವಲಯರವರಿಗೆ ಅವಗಾಹನೆಗೆ ಸಲ್ಲಿಸಿದೆ.
4. ಕಂದಾಯ ಅಧಿಕಾರಿಗಳು (ಯಲಹಂಕ) ಬೆಂಗಳೂರು ರವರ ಅವಗಾಹನೆಗೆ ಸಲ್ಲಿಸಿದೆ.
5. ಕಾರ್ಯಪಾಲಕ ಅಭಿಯಂತರರು, ಬ್ಯಾಟರಾಯನಪುರ ವಿಭಾಗರವರಿಗೆ ಸಲ್ಲಸಿದೆ
6. ಕಛೇರಿಕಡತಕ್ಕೆ.